



# ಒಳಾಂಗಣ ವಿನ್ಯಾಸ ಸೃಜನಶೀಲವಾಗಿರಲಿ...





■ ಸುಲಭಾ ಆರ್. ಭಟ್

ಮನೆಯ ಒಳಾಂಗಣ ವಿನ್ಯಾಸ ಆಕರ್ಷಕವಾಗಿದ್ದರೆ ಅತಿಥಿಗಳನ್ನು ಬಹುಬೇಗ ಸೆಳೆಯಬಹುದು. ಸೃಜನಶೀಲ ಮನಸ್ಸು ಇದ್ದರೆ ಮನೆಯೊಡತಿಯೇ ತನ್ನ ಮನೆಯ ವಿನ್ಯಾಸವನ್ನು ಸುಂದರವಾಗಿ ಮಾಡಿ ಒಪ್ಪ ಓರಣವಾಗಿರಿಸಬಹುದು.

ಪೀಠೋಪಕರಣ, ಕಿಟಕಿ ಪರದೆಗಳು, ಟೀವಿ ಸ್ಟ್ಯಾಂಡ್, ಆಲಂಕಾರಿಕ ವಸ್ತುಗಳಿಂದ ಮನೆಯನ್ನು ಸಿಂಗರಿಸಿದರೆ ಮನೆಯೊಳಗಿನ ಅಂದ ಹೆಚ್ಚುತ್ತದೆ. ಇಷ್ಟೆಲ್ಲ ಸಿಂಗರಿಸಿ ಗೋಡೆ ಮಾತ್ರ ಖಾಲಿ ಬಿಟ್ಟರೆ ಹೇಗೆ? ಈ ಎಲ್ಲಾ ಆಲಂಕಾರಿಕ ವಸ್ತುಗಳ ಜೊತೆಗೇ ಗೋಡೆಗಳು ಕೊಂಚ ಕಲಾತ್ಮಕವಾಗಿರುವುದೂ ಮುಖ್ಯ. ಹಿಂದಿನ ಕಾಲದ ಮನೆಗಳಲ್ಲಿ ಗೋಡೆಗಳ ಅಗಲಕ್ಕೂ ದೇವರ ಫೋಟೊಗಳು ಮತ್ತು ಕ್ಯಾಲಂಡರ್‌ಗಳನ್ನು ತೂಗು ಹಾಕುತ್ತಿದ್ದರು. ಈಗಿನ ಮನೆಗಳಲ್ಲಿ ದೇವರ ಕೋಣೆ ಪ್ರತ್ಯೇಕವಾಗಿರುತ್ತದೆ. ಹೀಗಾಗಿ ಮನೆಯ ಗೋಡೆಗಳ ಮೇಲೆ ದೇವರ ಫೋಟೊಗಳನ್ನು ಹಾಕುವ ಅಗತ್ಯವಿಲ್ಲ.

ಈಗಿನ ಕಾಲದ ಮನೆಯ ಗೋಡೆಗಳಿಗೆ ಕೊಂಚ ಕ್ರಿಯಾತ್ಮಕವಾಗಿ ಆಲೋಚಿಸಿ ಸರಳವಾದ ವಸ್ತು ಅಥವಾ ಕಲೆಯನ್ನು ಸೇರಿಸಿದರೆ ಆ ಕೋಣೆಯ ಅಂದ ಇನ್ನಷ್ಟು ಹೆಚ್ಚುತ್ತದೆ. ಹೊರಗಿನಿಂದ ಮನೆಗೆ ಆಗಮಿಸಿದ ಬಳಿಕ ಮನಸ್ಸಿಗೆ ಸಿಗುವ ಸಂತೋಷ ಮತ್ತು ತೃಪ್ತಿಗೆ ಸೃಜನಾತ್ಮಕ ಗೋಡೆಗಳು ಇನ್ನಷ್ಟು ಮುದ ನೀಡುತ್ತದೆ.

## ಸವಿನೆನಪುಗಳನ್ನು ದಾಖಲಿಸಿ...

ನಿಮ್ಮ ಜೀವನ ಸುಂದರ ನೆನಪುಗಳನ್ನು ಚಿತ್ರಪಟಗಳನ್ನು ಪ್ರಖರ ಬಣ್ಣದ ಅಂಚಿನ ಚೌಕಟ್ಟಿನಲ್ಲಿರಿಸಿ ಕಲಾತ್ಮಕವಾಗಿ ಗೋಡೆಗಳನ್ನು ಅಲಂಕರಿಸಿ. ಒಂದರ ಪಕ್ಕ ಇನ್ನೊಂದು ಸಾಲಾಗಿ ಫೋಟೊ ಫ್ರೇಮ್‌ಗಳನ್ನು ಜೋಡಿಸುವ ಕಾಲ ಸರಿದು ಹೋಗಿದೆ. ಈಗ ಪಕ್ಕದ ಚೌಕಟ್ಟು ಕೊಂಚವೇ ಕೆಳಗೆ ಬರುವಂತೆ, ಅದರ ನಂತರದ್ದು ಇನ್ನೂ ಕೊಂಚ ಕೆಳಗೆ ಬರುವಂತೆ ಜೋಡಿಸಿ. ಚಿಕ್ಕ ಚಿತ್ರದಿಂದ ದೊಡ್ಡ ಗಾತ್ರದವರೆಗೆ ಮೆಟ್ಟಲಿನಾಕಾರದಲ್ಲಿ ಜೋಡಿಸುವುದು ಕಲಾತ್ಮಕತೆಯ ಸಂಕೇತವಾಗಿದೆ.

## ಪೈಂಟಿಂಗ್ ತೂಗು ಹಾಕಬಹುದು

ಬಿಳಿ ಬಣ್ಣದ ಮೇಲೆ ನಿಮಗೆ ಇಷ್ಟವಾದ ಬಣ್ಣವನ್ನು ಸುಂದರವಾಗಿ ಬಿಡಿಸಿ. ವಿವಿದ ಬಣ್ಣಗಳನ್ನು ಬಳಸಿ ಕಲೆಗೊಂದು ರೂಪ ನೀಡಿ. ಒಂದು ವೇಳೆ ನಿಮ್ಮಲ್ಲಿ ಆ ಕಲಾವಿದನಿಲ್ಲದಿದ್ದಲ್ಲಿ ಒಂದೇ ಬಣ್ಣದ ವೃತ್ತಾಕಾರ, ಚೌಕಾಕಾರಗಳನ್ನು ಬಿಡಿಸಿ. ಪ್ರತಿ ಆಕೃತಿಗೂ ಪ್ರಖರವಾದ ಬೇರೆ ಬೇರೆ ಬಣ್ಣಗಳನ್ನು ಬಳಸುವ ಮೂಲಕ ವೈವಿಧ್ಯತೆಯನ್ನು ಪಡೆಯಬಹುದು. ಈಗ ಗೋಡೆಗೆ ಹಚ್ಚುವ ಸಿದ್ಧರೂಪದ ಅಲಂಕಾರದ ಚಿತ್ರಗಳು ಸಿಗುತ್ತವೆ. ಸೂಕ್ತವಾದವುಗಳನ್ನು ಖರೀದಿಸಿ ಮನೆಯ ಅಂದವನ್ನು ಹೆಚ್ಚಿಸಬಹುದು.

## ಗಾಢ ಬಣ್ಣದ ಪರದೆ, ಕಾರ್ಪೆಟ್ ಬಳಸಿ

ಕಿಟಕಿ ಮತ್ತು ಬಾಗಿಲುಗಳಿಗೆ ಗಾಢ ಬಣ್ಣದ ಪರದೇಗಳೇ ಸೂಕ್ತ. ನೆಲಕ್ಕೆ ನೇರಳೆ, ಕಾಫಿ ಅಥವಾ ಕಂದು ಬಣ್ಣದ ಕಾರ್ಪೆಟ್ ಸೂಕ್ತವಾದರೆ ಇದೇ ಬಣ್ಣದ ಕಿಟಕಿ ಪರದೆಗೂ ಉತ್ತಮವಾದ ಮೆರುಗು ನೀಡುತ್ತದೆ. ಆದರೆ ಪೀಠೋಪಕರಣಗಳು ಮತ್ತು ಮೇಜಿನ ಮೇಲಿನ ಬಟ್ಟೆ ಬಿಳಿ ಬಣ್ಣದಿರಲಿ. ಇದು ಹಿಂಭಾಗದ ಗಾಢವರ್ಣದ ಪರದೆ ಹಿಂಭಾಗದಲ್ಲಿ ಎದ್ದು ಕಾಣುತ್ತದೆ.

ಪುಸಕ್ತಗಳನ್ನು ಸುಂದರವಾಗಿ ಜೋಡಿಸಲು ಪುಸಕ್ತದ ಕಪಾಟೊಂದನ್ನು ಗೋಡೆಯ ಮಧ್ಯೆ ಇರಿಸಿ. ಒಂದು ದೊಡ್ಡ ಅಥವಾ ಗೋಡೆಗೇ ಅಳವಡಿಸಬಲ್ಲ ಚಿಕ್ಕ ಚಿಕ್ಕ ಮೂರು ಅಥವಾ ನಾಲ್ಕು ಕಪಾಟುಗಳನ್ನೂ ಮಾಡಿ. ಆದರೆ ಇವು ಗಾಢವರ್ಣದಲ್ಲಿದ್ದು ಬಿಳಿ ಬಣ್ಣದ ಹಿನ್ನೆಲೆಯಲ್ಲಿ ಕಾಣುವಂತಿರಬೇಕು. ಈ ಪುಸ್ತಕ ಕಪಾಟನ್ನು ನಿಮ್ಮ ಅಭಿರುಚಿಗೆ ತಕ್ಕಂತೆ ವಿಭಿನ್ನವಾದ ಆಕಾರದಲ್ಲಿ ನಿರ್ಮಿಸಬಹುದು. ಕೇವಲ ಪುಸ್ತಕಗಳನ್ನು ಮಾತ್ರ ಇಡದೆ ಆಲಂಕಾರಿಕ ವಸ್ತುಗಳನ್ನಿಡಲು ಸಾಧ್ಯವಾಗುವಂತಹ ಕಪಾಟನ್ನು ಮಾಡಿ ಇದು ಇನ್ನಷ್ಟು ಸುಂದರವಾಗಿ ಕಾಣುತ್ತದೆ.

## ಆಲಂಕಾರಿಕ ವಸ್ತುಗಳನ್ನು ಇರಿಸಿ

ಬಿಳಿ ಬಣ್ಣದ ಗೋಡೆಯ ಹಿನ್ನೆಲೆಯಲ್ಲಿ ಎದ್ದು ಕಾಣುವಂತಿರುವ ಕಲಾತ್ಮಕ ಮತ್ತು ಆಲಂಕಾರಿಕ ವಸ್ತುಗಳನ್ನು ಸ್ಥಾಪಿಸಿ ಮನೆಯ ಸುಂದರತೆಯನ್ನು ಹೆಚ್ಚಿಸಿ. ಒಂದು ವೇಳೆ ನಿಮ್ಮ ಮಸೆಯ ಸೋಫಾ ಸೆಟ್ ಬಿಳಿ ಬಣ್ಣದಲ್ಲಿದ್ದರೆ ಅದರಲ್ಲಿರುವ ದಿಂಬುಗಳು ಗಾಢವರ್ಣದಲ್ಲಿರಲಿ. ಇದರ ಮೇಲೆ ಸಾಕಷ್ಟು ಬೆಳಕು ಬೀಳುವಂತಿರಬೇಕು. ಇಲ್ಲದಿದ್ದರೆ ಒಂದು ಹೆಚ್ಚುವರಿ ಬಲ್ಬ್ ಅಥವಾ ಟ್ಯೂಬ್ ಲೈಟ್‌ನ್ನು ಹಾಕಿ ಬೆಳಕು ಸಾಕಷ್ಟಿರುವಂತೆ ನೋಡಿಕೊಳ್ಳಿ. ■